ಪಾಠ 17

## ಸಭೆ:

# ಅದರ ಡೀಕನರು, ಅವರ ಅರ್ಹತೆಗಳು ಮತ್ತು ಕರ್ತವ್ಯಗಳು

**ಪ್ರಥಮ ಡೀಕನರು**

1. **ಪ್ರಥಮ ಡೀಕನರುಗಳನ್ನು ನೇಮಿಸಿದ ಸಂದರ್ಭ ಯಾವುದಾಗಿತ್ತು (ಅಪೊಸ್ತಲರ ಕೃತ್ಯಗಳು 6:1-4)?**
2. **ಎಷ್ಟು ಜನರು ಆಯ್ಕೆ ಮಾಡಲ್ಪಟ್ಟರು (ಅಪೊಸ್ತಲರ ಕೃತ್ಯಗಳು 6:5)?**
3. **ಅವರನ್ನು ಯಾರು ಆಯ್ಕೆ ಮಾಡಿದರು (ಅಪೊಸ್ತಲರ ಕೃತ್ಯಗಳು 6:2, 3, 5)?**
4. **ಅರ್ಹತೆಗಳನ್ನು ಯಾರು ನೇಮಿಸಿದರು (ಅಪೊಸ್ತಲರ ಕೃತ್ಯಗಳು 6:2, 3)?**
5. **ಅವರು ಹೇಗೆ ನೇಮಿಸಲ್ಪಟ್ಟರು (ಅಪೊಸ್ತಲರ ಕೃತ್ಯಗಳು 6:6)?**
6. **ಈ ಪುರುಷರು ಡೀಕನರಾಗಿದ್ದಾರೆ ಎಂದು ಹೇಗೆ ತಿಳಿಯಬಹುದು?**

   ಇಲ್ಲಿ "ಸೇವೆಮಾಡು" ಎಂದು ಭಾಷಂತರಿಸಲ್ಪಟ್ಟ diakoneo, ಎಂಬ ಗ್ರೀಕ ಪದವು (ಅಪೊಸ್ತಲರ ಕೃತ್ಯಗಳು 6:2) 1 ತಿಮೊಥೆ 3:10, 13ರಲ್ಲಿ "ಡೀಕನರಂತೆ ಸೇವೆ ಮಾಡಿರಿ" ಎಂದು ಪೌಲನು ಉಪಯೋಗಿಸಿದ ಅದೇ ಪದದಿಂದ ಬಂದಿದೆ.

**ಅರ್ಹತೆಗಳ ಪಟ್ಟಿ**

| **ನಕಾರಾತ್ಮಕ ಗುರುತುಗಳು** | **ಉಲ್ಲೇಖಗಳು** | **ಅರ್ಥ** |
|---|---|---|
| ಎರಡು ಮಾತಿನವನಾಗಿರ ಬಾರದು | 1 ತಿಮೊಥೆ 3:8 | ಒಬ್ಬನಿಗೆ ಒಂದು ಸಂಗತಿಯನ್ನು ಇನ್ನೊಬ್ಬನಿಗೆ ಇನ್ನೊಂದು ಸಂಗತಿಯನ್ನು ಹೇಳಬಾರದು |
| ಮದ್ಯನಿರತನಾಗಿರ ಬಾರದು | 1 ತಿಮೊಥೆ 3:8 | ಮದ್ಯಪಾನಕ್ಕೆ ಗುಲಾಮನಾಗಿರಬಾರದು |
| ನೀಚ ಲಾಭವನ್ನು ಅಪೇಕ್ಷಿಸುವವನಾಗಿರ ಬಾರದು | 1 ತಿಮೊಥೆ 3:8 | ಅನ್ಯಾಯದ ಲಾಭಕ್ಕಾಗಿ ಅತಿಯಾಶೆ ಇರಬಾರದು |
| **ಸಕಾರಾತ್ಮಕ ಗುರುತುಗಳು** | | |
| ತಪ್ಪಿಲ್ಲದವನು | 1 ತಿಮೊಥೆ 3:10 | ಅವನ ವಿರುದ್ಧ ಯಾವುದು ರುಜುವಾತಾಗಬಾರದು |
| ಗಂಭೀರನು | 1 ತಿಮೊಥೆ 3:8 | ಗಂಭೀರನು ಇಲ್ಲವೇ ಘನತೆಯುಳ್ಳವನು |
| ಸತ್ಯಾರ್ಥವನ್ನು ಶುದ್ಧ ಮನಸಾಕ್ಷಿಯಿಂದ ಕೈಕೊಳ್ಳುವವನು | 1 ತಿಮೊಥೆ 3:9 | ಯಥಾರ್ಥ ಹೃದಯದಿಂದ ಅತ್ಯುತ್ತಮವಾದದ್ದನ್ನು ಮಾಡುವವನು |
| ಏಕಪತ್ನಿಯುಳ್ಳವನು | 1 ತಿಮೊಥೆ 3:12 | ಬಹು ಪತ್ನಿವುಳ್ಳವನಲ್ಲ |

| **ನಕಾರಾತ್ಮಕ ಗುರುತುಗಳು** | **ಉಲ್ಲೇಖಗಳು** | **ಅರ್ಥ** |
|---|---|---|
| ಅವರು ಮೊದಲು ಪರೀಕ್ಷಿಸಲ್ಪಡಬೇಕು | 1 ತಿಮೊಥೆ 3:10 | ಅವನ ಗುಣವು ರುಜುವಾತಾಗಬೇಕು |
| ಮಕ್ಕಳನ್ನು ಮನೆಯವರನ್ನು ಚೆನ್ನಾಗಿ ಆಳುವವನು | 1 ತಿಮೊಥೆ 3:12 | ತನ್ನ ಮನೆಯನ್ನು ಯೋಗ್ಯವಾಗಿ ಆಳುವವನು |

**ಅರ್ಹತೆಗಳ ಮೇಲೆ ಪ್ರಶ್ನೆಗಳು**

1. **ಡೀಕನರ ಸೇವೆಯ ಮಹತ್ವದ ಬಗ್ಗೆ ನೀವು ಏನು ಯೋಚಿಸುವಿರಿ?**
2. **ಎಷ್ಟು ನಕಾರಾತ್ಮಕ ಗುರುತುಗಳು ಇವೆ? ಪ್ರತಿಯೊಂದರ ಅರ್ಥ ಕೊಡಿರಿ.**
3. **ಸಕಾರಾತ್ಮಕ ಗುರುತುಗಳು ಎಷ್ಟು? ಅವುಗಳಲ್ಲಿ ಪ್ರತಿಯೊಂದನ್ನು ನಿರೂಪಿಸಿರಿ.**
4. **ಹಿರಿಯರು "ಬೋಧಿಸುವವರಲ್ಲಿ ಪ್ರವೀಣರಾಗಿರಬೇಕಾದರೆ" ಡೀಕನರು ಏನು ಮಾಡಬೇಕು (1 ತಿಮೊಥೆ 3:10, 13)?**
5. **ಹಿರಿಯರ ಅರ್ಹತೆಗಳಿಗೆ ಯಾವ ನಕಾರಾತ್ಮಕ ಗುರುತುಗಳು ಸಾಮಾನ್ಯವಾಗಿವೆ?**
6. **ಹಿರಿಯರ ಅರ್ಹತೆಗಳಿಗೆ ಯಾವ ಸಕಾರಾತ್ಮಕ ಗುರುತುಗಳು ಸಾಮಾನ್ಯವಾಗಿವೆ?**
7. **ಹಿರಿಯರು ಡೀಕನರಿಗಿಂತ ಯಾವ ರೀತಿಯಲ್ಲಿ ಶ್ರೇಷ್ಠರಾಗಿದ್ದಾರೆ?**

**ಡೀಕನರ ಕೆಲಸ**

1. **ಪ್ರಥಮ ಡೀಕನರು ಏನನ್ನು ಮಾಡಬೇಕಾಗಿತ್ತು (ಅಪೊಸ್ತಲರ ಕೃತ್ಯಗಳು 6:2-4)?**
2. **ಡೀಕನರು ಏನು ಮಾಡಬೇಕೆಂದು ಪೌಲನು ಹೇಳಿದನು (1 ತಿಮೊಥೆ 3:10, 13)?**
   a. ಡೀಕನರ ಕೆಲಸದಲ್ಲಿ ಕೆಲವುಗಳು ಯಾವವು (ಅಪೊಸ್ತಲರ ಕೃತ್ಯಗಳು 6:1-3ಬಿ)?
   "ಅನುದಿನದ ಸೇವೆಯಲ್ಲಿ" ಯಾವುದು ಒಳಗೊಂಡಿತ್ತು (ಅಪೊಸ್ತಲರ ಕೃತ್ಯಗಳು 4:34, 35)?
   b. ಯಾವ ಆರ್ಥಿಕ ಸಾಮರ್ಥ್ಯವು ಡೀಕನರ ಗುಣಲಕ್ಷಣ ವಿವರಿಸುವುದು (ಅಪೊಸ್ತಲರ ಕೃತ್ಯಗಳು 2:45; 4:35)?
   c. ಈ ಸಂಗತಿಗಳು ಯಾರ ಜವಾಬ್ದಾರಿಕೆಯಲ್ಲಿರ ಬೇಕು - ಕೂಟದ ಮನೆಯ ವ್ಯವಸ್ಥೆ - ಅದರ ದೀಪಗಳು, ಸ್ವಚ್ಛತೆ, ಕಾಪಾಡುವಿಕೆ, ಕರ್ತನ ಮೇಜನ್ನು ಸಿದ್ಧಪಡಿಸುವುದು, ಬಂದವರ ಸೇವೆ ಮಾಡುವದು, ಬಾಪ್ತಿಸ್ಮ ಸ್ಥಳದ ಕಾಪಾಡುವಿಕೆ, ಬಂದವರನ್ನು ಸ್ವಾಗತಿಸುವುದು, ಸ್ಥಳದ ವಾತಾವರಣದ ಏರ್ಪಾಟು ಮತ್ತು ದಾನಧರ್ಮಕಾರ್ಯ?

**ಡೀಕನರ ಬಹುಮಾನ**

1. **ನಂಬಿಗಸ್ತ ಡೀಕನರು ಇತರರಿಂದ ತಮಗಾಗಿ ಏನನ್ನು ಹೊಂದಿಕೊಳ್ಳುವರು (1 ತಿಮೊಥೆ 3:13)?**
2. **ಕರ್ತನ ವಿಶ್ವಾಸದಲ್ಲಿ ಅವರು ಏನನ್ನು ಲಾಭಗಳಿಸುವರು (1 ತಿಮೊಥೆ 3:13)?**

**ಸರ್ವ ಸಾಮಾನ್ಯಾವಾಗಿ**

1. **ಒಬ್ಬ ಯುವಕನು ಡೀಕನನಾಗಿ ಸೇವೆ ಮಾಡಬಹುದೋ?**
2. **ಯಾವ ರೀತಿಯಲ್ಲಿ ಹಿರಿಯರ ಮತ್ತು ಡೀಕನರ ಕೆಲಸವು ಬೇರ್ಪಡಿಸಲಾರದ್ದಾಗಿದೆ?**
3. **ಅತ್ಮಿಕವಾದದ್ದನ್ನು ಮತ್ತು ಪ್ರಾಪಂಚಿಕವಾದದ್ದನ್ನು ಹೇಗೆ ಸಮತೋಲನ ಗೊಳಿಸಬೇಕು?**



© 2009 Truth for Today